# <u>ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ</u>

**ಎಂ.ವಿ.ಸಿ ನಂ: 890/2022**

**ಆರ್.ಡಬ್ಲ್ಯೂ :3 ,**

**<u>ದಿನಾಂಕ :26-06-2025ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ :- ಶ್ರೀ ಟಿ.ವಿ.ಪಿ ವಕೀಲರಿಂದ</u>**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ಅಧಿಕಾರ ಪತ್ರವನ್ನು ನಿಆರ್ 9 ಎಂದು ಗುರುತಿಸಲಾಯಿತು. ತನಿಖಾ ವರದಿಯನ್ನು ನಿಆರ್-10 ಎಂದು ಗುರುತಿಸಲಾಂತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಲಾಗಿದೆ.

**ಪಾಟೀ ಸವಾಲು:- ಶ್ರೀ ವಿ.ಎಸ್ಆರ್ ಅರ್ಜಿದಾರ ಪರ ವಕೀಲರು:**

KA-32-D-2776 ವಾಹನ ನಮ್ಮ ಕಂಪನಿಯಲ್ಲಿ ವಿಮೆ ಹೊಂದಿದೆ ಎಂದರೆ ಸರಿ. ಸದರಿ ವಾಹನ ಪ್ರಯಾಣಿಕರ ಮತ್ತು ಪಾಕೇಜ್ ಹೊಂದಿದೆ ಎಂದರೆ ಸರಿ. ನಾನು ಈ ಪ್ರಕಣದ ಪ್ರ.ವ.ವರದಿಯನ್ನು ಮತ್ತು ಅಂತಿಮ ವರದಿ ನೋಡಿದ್ದೇನೆ ಎಂದರೆ ಸರಿ. ಸದರಿ ಅಂತಿಮ ವರದಿಯ ಪ್ರಕಾರ KA-32-D-2776 ರಲ್ಲಿ ವಾಹನದಲ್ಲಿ ಇಬ್ಬರು ಪ್ರಯಾಣಿಕರು ಇದ್ದರು ಎಂದರೆ ಸರಿ. ಅಂತಿಮ ವರದಿ ಪ್ರಕಾರ ಪೊಲೀಸರು ಎರಡು ವಾಹನಗಳ ಮೇಲೆ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದ ನಮ್ಮ ವಿಮೆ ಹೊಂದಿದ ವಾಹನ ಈ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ವಿಮೆ ಹೊಂದಿದ ವಾಹನದ ಚಾಲಕನ ಮೇಲೆ ಕಲಂ 279, 338, 304(ಎ) ಭಾ.ದ.ಸ. ಅಡಿಯಲ್ಲಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ತಪ್ಪು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ನಮ್ಮ ವಿಮೆ ಹೊಂದಿದ ವಾಹನದ ಮೇಲೆ ಡಿ.ಎಲ್, ಪರಮೀಟ ಮತ್ತು ವಿಮೆ ಷರತ್ತುಗಳನ್ನು ಉಲ್ಲಂಘನೆ ಆಗಿದೆ ಎಂದು ಯಾವುದೇ ಆಪಾದನೆ ಇಲ್ಲ ಎಂದರೆ ಸಾಕ್ಷಿ ಸದರಿ ವ್ಯಕ್ತಿಯ ದಾಖಲೆಗಳನ್ನು ತಂದು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ವಿಮೆ ತನಿಖಾ ವಾದಿಯ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ತನಿಖಾ ವರದಿ ಪ್ರಕಾರ KA-32-D-2776 ವಾಹನದ ಚಾಲಕನಿಗೆ ಚಾಲನ ಪತ್ರ ಹೊಂದಿರುವುದಿಲ್ಲ, ಈ ಸಂಗತಿಯು ಪೊಲೀಸ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ವರದಿಯಲ್ಲಿ ಇಬ್ಬರು ತಪ್ಪು ಇದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಘಟನೆ ಬಗ್ಗೆ ಸಾರಂಶ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದೇನೆ, ನಮ್ಮ ತಪ್ಪು ತನಿಖಾ ವರದಿಯ ಮೇಲೆ ಸಾಕ್ಷಿ ನುಡಿಯುತ್ತಿದ್ಕೇನೆ ಎಂದರೆ ಸರಿಯಲ್ಲ. ನಮ್ಮ ವಿಮೆ ಕಂಪನಿ ಯಾವುದೆ ತನಿಖಾ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ

ಕಂಪನಿಯ ತನಿಖಾ ಅಧಿಕಾರ ಸ್ವಂತ ತನಿಖೆ ಮಾಡಿಲ್ಲ, ಪೊಲೀಸ್ ವರದಿ ಪ್ರಕಾರ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸ್ ವರದಿ ಪ್ರಕಾರ ಎರಡು ವಾಹನಗಳ ತಪ್ಪಿ ನಿಂದ ಅಪಘಾತ ಆಗಿದೆ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಎಂ.ವಿ.ಐ ಪ್ರಕಾರ ಒಂದು ವಾಹನ ಹಿಂದಿನಿಂದ ಬಂದು ಡಿಕ್ಕಿ ಪರಸಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸ್ ವರದಿ ಪ್ರಕಾರ ಎರಡು ವಾಹನ ಮುಖಾಮುಖಿ ಡಿಕ್ಕಿ ಆಗಿದೆ ಎಂದರೆ ಸರಿಯಲ್ಲ. ನಮ್ಮ ವಿಮೆ ಹೊಂದಿದ ವಾಹನ ತಪ್ಪಿಲ್ಲ ಎಂದು ಪೊಲೀಸ್ ವರದಿಯು ಪ್ರಶ್ನಿಸಿಲ್ಲ. KA-32-D-2776 ಯು ಯಾವುದೇ ವಿಮೆ ಷರತ್ತು ಉಲ್ಲಂಘನೆ ಆಗಿಲ್ಲ, ನಮ್ಮ ಜವಾಬ್ದಾರಿಯು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್-3 ಅಂಚೆ ಸ್ವೀಕೃತ ವಿಳಾಸ ತಪ್ಪು ವಿಳಾಸಕ್ಕೆ ಕಳುಹಿಸಿದೆಎಂದರೆ ಸರಿಯಲ್ಲ.

**<u>ವಾಟೀ ಸವಾಲು ಃ -</u> ಶ್ರೀ ವಿ.ಎನ್.ಎಂ. 2ನೇ ಎದರುದಾರರ ಪರ ವಕೀಲರಿಂದಃ**

ನಾನು ಪ್ರ.ವ.ವರದಿ ಮತ್ತು ಅಂತಿಮ ವರದಿ ನೋಡಿರುತ್ತೇನೆ. ದೂರಿನ ಪ್ರಕಾರ ಅಪಘಾತ ಮುಖಾಮುಖಿ ಆಗಿದೆ ಎಂದು ದೂರು ಸಲ್ಲಿಸಲಾಗಿದೆ ಎಂದರೆ ಸರಿ. ದೂರಿನ ಆಧಾರದ ಮೇಲೆ ತನಿಖೆ ನಡೆಸಿ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಯಾರ ಆಧಾರದ ಮೇಲೆ ಪೊಲೀಸರು ಸುಳ್ಳು ವರದಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಿದ್ದಿರಿ ಸಾಕ್ಷಿ ಸುಳ್ಳು ದೂರು ಎಂದು ನುಡಿಯುತ್ತಾರೆ. ಪೊಲೀಸರ ವರದಿ ಸುಳ್ಳು ಎಂದು ಪ್ರಶ್ನಿಸಿಲ್ಲ. ನಿಪಿ-10 ವರದಿಯನ್ನು ಕಲಬುರಗಿ ಸ್ಥಳದ ವಕೀಲರು ಎಂದರೆ ಸರಿ. ನಿಪಿ-10 ರಲ್ಲಿ ಚಕ್ ಲಿಸ್ಟ ಸಲ್ಲಿಸಲಾಗಿದ್ದು, ಎಲ್ಲಾ ದಾಖಲೆಗಳನ್ನು ಸಲ್ಲಿಸಿಲ್ಲ. ನಿಪಿ-10 ಸುಳ್ಳು ವರದಿ ಎಂದರೆ ಸರಿಯಲ್ಲ. KA-32-D-9993 ವಾಹನದಿಂದ ಮಾತ್ರ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಹನದ ಚಾಲಕರಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಮನಗಾರಿಕೆಯನ್ನು ತಪ್ಪಿ ಸಿಕೊಳ್ಳಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಎರಡು ವಾಹನಗಳ ಮಧ್ಯ ಆದರೂ ಸಹ KA-32-D-9993 ವಾಹನದಿಂದ ಮಾತ್ರ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ಸಲ್ಲಿಸಿದ ತನಿಖಾ ಅಧಿಕಾರಿಗಳು ನಾವೆ ನೇಮಕ ಮಾಡಿರುತ್ತೇವೆ ಎಂದರೆ ಸರಿ. ಸದರಿ ವ್ಯಕ್ತಿ ನಮ್ಮ ಸೂಪರವೈಜ ಅಡಿಯಲ್ಲಿ ಇರುತ್ತಾನೆ ಎಂದರೆ ಸರಿ. ಸದರಿ ವ್ಯಕ್ತಿಯು ನಮ್ಮ ಕೆಳಗೆ ಕೆಲಸ ಮಾಡುತ್ತಿದ್ದಾನೆ ನಮ್ಮ ಹೇಳಿಕೆ ಮೇರೆಗೆ ಸುಳ್ಳು ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರ ನಂ.1 ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**